**ಪ್ರಾಸಾ-1, ಶೈಲಾ ಹೆಬ್ಬಾಳ ರವರನ್ನು ದಿನಾಂಕಃ 18.03.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

## ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

4. ಆರೋಪಿತರಿಗೂ ಮತ್ತು ನಮಗೂ ಖುಲ್ಲಾ ಜಾಗೆಗೆ ಸಂಬಂಧಿಸಿದಂತೆ ಆಗಾಗ ಜಗಳ ಆಗುತ್ತಿತ್ತು. ಸದರಿ ಖುಲ್ಲಾ ಜಾಗೆ ನಮ್ಮ ಅಜ್ಜನ ಹೆಸರಿನಲ್ಲಿ ಇರುತ್ತದೆ.

5. ದಿಃ 25.03.2022 ರಂದು, ಬೆಳಿಗ್ಗೆ 09.00 ಗಂಟೆ ಸುಮಾರಿಗೆ, ಚಾಸಾ-4 ಮತ್ತು 5 ರವರು ಸೇರಿಕೊಂಡು ನಮಗೆ ಸಂಬಂಧಿಸಿದ ಖುಲ್ಲಾ ಜಾಗವನ್ನು ಸ್ವಚ್ಛ ಮಾಡಲು ಹೋಗಿದ್ದರು. ಅವರು ಹೋಗಿ 5 ರಿಂದ 10 ನಿಮಿಷಗಳ ನಂತರ ಊರಿನ ಜನರು ಆರೋಪಿಗಳು ಚಾಸಾ-4 ಮತ್ತು 5 ರವರಿಗೆ ಬಡಿಗೆಯಿಂದ ಹೊಡೆಯುತ್ತಿದ್ದಾರೆ ಎಂದು ನನಗೆ ಹೇಳಿದರು. ಆಗ ನಾನು ಸ್ಥಳಕ್ಕೆ ಹೋಗಿ ನೋಡಿದಾಗ, ಆರೋಪಿಗಳು ಚಾಸಾ-4 ಮತ್ತು 5 ರವರ ಜೊತೆ ಜಗಳ ಮಾಡುತ್ತಾ ಅವರಿಗೆ ಬಡಿಗೆಯಿಂದ ಹೊಡೆಯುತ್ತಿದ್ದರು. 2 ಮತ್ತು 3 ನೇ ಆರೋಪಿಗಳು ನನ್ನ ಗಂಡನಿಗೆ ಹೊಡೆಯುತ್ತಾ ಇದ್ದರು, ಆಗ ನನ್ನ ಮಾವ ಬಿಡಿಸಲು ಹೋದಗ, 1 ಮತ್ತು 3 ನೇ ಆರೋಪಿತರು ಬಡಿಗೆಯಿಂದ ನನ್ನ ಮಾವನಿಗೆ ಹೊಡೆಯುತ್ತಿದ್ದರು. 3 ನೇ ಆರೋಪಿಯು ನನ್ನ ಗಂಡನ ಮೊಣಕಾಲಿಗೆ ಹೊಡೆದಿದ್ದರಿಂದ,



ನನ್ನ ಗಂಡ ನೆಲಕ್ಕೆ ಬಿದ್ದನು, ನಂತರ 2 ನೇ ಆರೋಪಿ ನನ್ನ ಗಂಡನ ಹೊಟ್ಟೆಯ ಮೇಲೆ ಕುಳಿತು, ನನ್ನ ಗಂಡನ ಎದೆಗೆ ಕೈಯಿಂದ ಹೊಡೆದನು.

6. ನಾನು ಸದರಿ ಘಟನೆ ನೋಡಿ ಚೀರಾಡಿದಾಗ ಮತ್ತು ಆರೋಪಿತರಿಂದ ನನ್ನ ಮಾವ ಮತ್ತು ಗಂಡನನ್ನು ಬಿಡಿಸಲು ಯಾರಾದರೂ ಬನ್ನಿ ಎಂದು ಕೂಗಿದಾಗ, ಚಾಸಾ-6 ರಿಂದ 8 ರವರು ಸ್ಥಳಕ್ಕೆ ಬಂದರು. ನಾನು ಆ ಸಮಯದಲ್ಲಿ ಗರ್ಭಿಣಿ ಇದ್ದು, ಅಲ್ಲಿ ಹೋದರೆ ನನಗೂ ಹೊಡೆಯಬಹುದು ಎಂದು ಹೆದರಿ ನಾನು ಹತ್ತಿರಕ್ಕೆ ಹೋಗಲಿಲ್ಲ. ಚಾಸಾ-6 ರಿಂದ 8 ರವರು ಜಗಳ ಬಿಡಿಸಿದಾಗ, ಆರೋಪಿಗಳು ನನ್ನ ಗಂಡನಿಗೆ ಹಾಗೂ ನನ್ನ ಮಾವನಿಗೆ, ಅವರು ಬರದೇ ಹೋಗಿದ್ದರೆ, ನಿಮ್ಮ ಜೀವಾ ತೆಗೆಯುತ್ತಿದ್ದೆವು ಎಂದು ಹೇಳಿದರು. ಘಟನೆಯಾದಾಗ ಸಮಯ ಬೆಳಿಗ್ಗೆ 09.30 ಗಂಟೆಯಾಗಿತ್ತು.

7. ಆರೋಪಿಗಳು ನನ್ನ ಗಂಡನಿಗೆ ಹೊಡೆದಿದ್ದರಿಂದ, ಅವರಿಗೆ ಬಲ ಹಣೆಗೆ, ಎಡಕಿವಿಯ ಹಿಂಭಾಗಕ್ಕೆ, ಬಲಗಡೆ ಕಿವಿಯ ಹತ್ತಿರ ಗಾಯಗಳಾಗಿದ್ದವು ಮತ್ತು ನನ್ನ ಗಂಡನ ಬಲಗೈ ಮುರಿದ ಹಾಗೆ ಆಗಿತ್ತು. ನನ್ನ ಗಂಡನ ಎಡಗೈ ಮುಂಗೈಗೆ, ಎಡ ಮೊಣಕಾಲಿಗೆ ಮತ್ತು ಹಿಮ್ಮಡಿಗೆ ಬಲವಾದ

ಪೆಟ್ಟಾಗಿತ್ತು.

8. ನಾನು ಈ ಘಟನೆಯ ಬಗ್ಗೆ ದೂರನ್ನು ಪೊಲೀಸರಿಗೆ ನೀಡುತ್ತೇನೆ ಎಂದು ಹೇಳಿದ್ದಕ್ಕೆ, 2 ನೇ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದನು.

9. ನಂತರ ನಾನು ನನ್ನ ಗಂಡನನ್ನು ಬನ್ನಿಕೊಪ್ಪದ ಒಂದು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಅವರು ನನ್ನ ಗಂಡನಿಗೆ ಪ್ರಥಮ ಚಿಕಿತ್ಸೆ ನೀಡಿದರು, ಆ ಸಮಯದಲ್ಲಿ ನನ್ನ ಗಂಡನಿಗೆ ಪ್ರಜ್ಞೆ ಇರಲಿಲ್ಲ. ನಂತರ ಸದರಿ ವೈದ್ಯರು ಗದಗನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದು, ಒಂದು ಬಾಡಿಗೆ ಕಾರು ಮಾಡಿಕೊಂಡು ಗದಗನ ಜಿಲ್ಲಾ ಆಸ್ಪತ್ರೆಗೆ ನನ್ನ ಗಂಡನನ್ನು ಕರೆದುಕೊಂಡು ಬಂದು ದಾಖಲು ಮಾಡಿದೆವು. ಅಲ್ಲಿ ನನ್ನ ಗಂಡನು ಒಳರೋಗಿಯಾಗಿ 6 ದಿನ ಇದ್ದರು.

10. ನಾನು ಆ ಸಮಯದಲ್ಲಿ ಗರ್ಬಿಣಿ ಇದ್ದುದರಿಂದ ಹಾಗೂ ನನ್ನ ಅಜ್ಜನಿಗೂ ಸಹ ಹುಷಾರ ಇಲ್ಲದೇ ಇದ್ದ ಕಾರಣ ನನ್ನ ಗಂಡನಿಗೆ ಪ್ರಜ್ಞೆ ಬರುವವರೆಗೂ ಕಾಯ್ದು ನಂತರ ಹಿರಿಯರಿಗೆ ವಿಚಾರಿಸಿ, **ದಿಃ 27.03.2022 ರಂದು ದೂರನ್ನು ದಾಖಲಿಸಿರುತ್ತೇನೆ. ಈಗ ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.**

11. ನನ್ನ ಗಂಡನಿಗೆ ಹಾಗೂ ಮಾವನಿಗೆ ಹೊಡೆಯಲು ಆರೋಪಿಗಳು ಉಪಯೋಗಿಸಿದ ಬಡಿಗೆಗಳನ್ನು ನೋಡಿದರೆ ಗುರುತಿಸುತ್ತೇನೆ. **ಈಗ ತೆರೆದ ನ್ಯಾಯಾಲಯದಲ್ಲಿ ಪೇಪರಿನಲ್ಲಿ ಸುತ್ತಿರುವ**



**ಎರಡು ಬಡಿಗೆಗಳನ್ನು ತೆಗೆದು, ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅವುಗಳನ್ನು ಗುರುತಿಸಿದ್ದು, ಸದರಿ ಎರಡೂ ಬಡಿಗೆಗಳನ್ನು ಒಟ್ಟಾಗಿ ಮು.ಮಾ.1 ಎಂದುಗುರುತಿಸಲಾಯಿತು.**

12. ನಮ್ಮ ಖುಲ್ಲಾ ಜಾಗಕ್ಕೆ ಸಂಬಂಧಿಸಿದ RTC Extract ನ್ನು ನೋಡಿದರೆ ಗುರುತಿಸುತ್ತೇನೆ. ಸದರಿ RTC Extract ಝುರಾಕ್ಸ ಪ್ರತಿಯಾಗಿರುತ್ತದೆ.

**(ಈಗ ಸಮಯ ಮದ್ಯಾಹ್ನ 02.00 ಗಂಟೆಯಾಗಿರುವುದರಿಂದ, ಮುಂದುವರೆದ ಮುಖ್ಯ ವಿಚಾರಣೆಯನ್ನು ಮದ್ಯಾಹ್ನ 02.45 ಗಂಟೆಗೆ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

*<u>SC No. 60/2022</u>*
*PW - 1*

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಗದಗ**

**ಪ್ರಾಸಾ-1, ಶೈಲಾ ಹೆಬ್ಬಾಳ ರವರನ್ನು ಮದ್ಯಾಹ್ನ 02.45 ಗಂಟೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

## ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ

13. ನಾನು ಪೋಲೀಸರಿಗೆ ಖುಲ್ಲಾ ಜಾಗಕ್ಕೆ ಸಂಬಂಧಪಟ್ಟ ಉತಾರ, ಚೆಕ್ಕುಬಂದಿ ನಕಾಶೆ, ಟ್ಯಾಕ್ಸ ತುಂಬಿದ ರಸೀದಿಗಳನ್ನು ಕೊಟ್ಟಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**